ರಾಜಸಂಭ್ರಮದಿಂದ ಬಭ್ರುವಾಹನ ಎಂದು ಹೆಸರಿಟ್ಟಳು. ಎಳೆಯ ಮಗುವಿಗೆ ಮೋಹದ ಹೆಮ್ಮೆಯಿಂದ ಮೊಲೆಯೂಡಿ ಪಾಲಿಸುತ್ತ, ಪಾರ್ಥನನ್ನು ಮರೆತಳು. ಸಿಂಹಿಣಿಯು ಕಿಶೋರ ಕೇಸರಿಯನ್ನು ಸಾಕುವಂತೆ ಸಾಕಿದಳು. ಮತ್ತೋರ್ವ ಅರ್ಜುನನೊ ಎನ್ನುವಂತೆ ತನ್ನ ನಾಡಿಗೆ ತಾನು ಕೋಟೆಯಾಗಿ ಬೆಳೆದನು. ನೆರೆಯ ರಾಜ್ಯದ ದೊರೆಗಳ ದರ್ಪಕ್ಕೆ ಕೊಡಲಿಯಾದನು.

ಚಿತ್ರವಾಹನನು ಗತಿಸಲು ಚಿತ್ರಾಂಗದೆಯೆ ರಾಜ್ಯಸೂತ್ರವನ್ನು ಹಿಡಿದು ದರ್ಪದಿಂದ ನಡೆಸಿದಳು. ಕಿರಿಮಗನು ಹರೆಯಕ್ಕೆ ಬರಲು ರಾಜ್ಯವನ್ನು ಅವನ ಕೈಗಿಟ್ಟಳು. ಪಟ್ಟಣದ ಹೊರವಲಯದ ಒಂದು ಉದ್ಯಾನವನದಲ್ಲಿ ಸದಾ ತಪಸ್ಸಿನಿಂದಿದ್ದಳು. ಮಗನು ಒಮ್ಮೊಮ್ಮೆ ತನ್ನ ಬಳಿಗೆ ಬಂದಾಗ ಅವನಿಗೆ ರಾಜ ನೀತಿಯನ್ನು ಮತ್ತು ಧರ್ಮ ಭೀತಿಯನ್ನು ಕಲಿಸುತ್ತಿದ್ದಳು.

ಆ ಬಭ್ರುವಾಹನನು ಎಷ್ಟೆ ಬಲಶಾಲಿ ಯಾದರೂ, ಕಚ್ಚಿ ವಿಷಕಾರಿ ಕೊಲ್ಲದೆಯೆ ಹೆಡೆಯೆತ್ತಿ ಹೆದರಿಸುವ ನಯದಮಾರ್ಗವನ್ನೆ ಹಿಡಿದನು. ವಿಜಯಲಂಪಟತೆಯಿಂದ ವಿನಾಕಾರಣ ಅಕ್ಕಪಕ್ಕದ ನಾಡುಗಳನ್ನು ಮುತ್ತಿ ರಕ್ತವನ್ನು ತೊರೆಯಾಗಿ ಹರಿಸಿ, ಕಪ್ಪಕಾಣಿಕೆ ತೆಗೆದುಕೊಳ್ಳುತ್ತಿರಲಿಲ್ಲ. ನೆರೆಯ ದೊರೆಗಳನ್ನು ಮಿತ್ರರೆಂದು ತಿಳಿದು ರಾಜ್ಯಭಾರ ಮಾಡುತ್ತಿರಲು ಅವನ ರಾಜ್ಯ ವರ್ಧಿಸುತ್ತ ಸ್ವರ್ಗವೆಂಬಂತಾಯಿತು. ಮಣಿಪುರವು ವಿಸ್ತಾರಗೊಂಡು ಮೆರೆಯಿತು. ಸೌಂದರ್ಯ ಸ್ವಾತಂತ್ರ್ಯ ಸಂಸ್ಕೃತಿಗಳೊಡನೆ ಧೈರ್ಯ ಶೌರ್ಯಗಳಿಂದ, ಶಾಂತಿಯಿಂದ ಆ ರಾಜ್ಯದ ಪ್ರಜೆಗಳು ಸದಾ ಸಂತೋಷದಿಂದಿದ್ದರು!

**ಸಿತವಾಹನನಂಗೆಲ್ಲಿ ಚಿತ್ರಾಂಗದೆಯ ನೆನಹು?**

ಸಂವತ್ಸರಗಳು ಉರುಳಿ ನಿರಂತರವಾಗಿ ಕಾಲನದಿ ಹರಿಯುತ್ತಿತ್ತು. ಆರು ತಿಂಗಳಿಗೆ ಮತ್ತೆ ಹಿಂತಿರುಗಿ ಬಂದು ಕಾಣುವೆನೆಂದು ಹೇಳಿ ಮಾತುಕೊಟ್ಟು ಹೋದ ಪಾರ್ಥ ಯತಿಯು ಕಾರಣಾಂತರಗಳಿಂದ ಎರಡು ತಿಂಗಳು ತಡವಾಗಿ ಶಿವನ ಗುಡಿಗೆ ಬಂದನು. ಇನಿಯಳನ್ನು ಕಾಣದೆ, ಕಣ್ಣೀರು ಕರೆದು, ಮನಸ್ಸಿನಲ್ಲಿ ಮಮ್ಮಲ ಮರುಗಿದನು. ಕಾಂತೆ ಎಲ್ಲಿರುವಳು, ಅವಳು ಯಾರು ಎನ್ನುವುದನ್ನು ತಿಳಿಯದೆಯೆ ಕಾದಲೆಗೆ ಕಾದನು. ಕೆಲದಿನಗಳು ಅಲ್ಲಿದ್ದು, ಅವಳು ಕಾಣದಿರಲು ಉತ್ತರಕ್ಕೆ ಮುಂದುವರಿದನು. ತನ್ನ ಅಕ್ಕರೆಯ ಹೆಣ್ಣಿಗಾಗಿ ಎನ್ನುತ್ತ ಭಾರತದ ಉತ್ತರಕ್ಕೆ ನಡೆದನು.

ವಿಧಿಯ ನಿಯಮದಂತೆ ಮುಂದೆ ಕುರು ಮತ್ತು ಪಾಂಡು ಮಕ್ಕಳ ಮಧ್ಯೆ ಭೀಷಣ ಯುದ್ಧ ನಡೆಯಿತು. ಅದು ಮೈನವಿರೇಳಿಸುವ ಮಹತ್ ಭವ್ಯಭಾರತ ಯುದ್ಧ. ಅದು ಭೀಷ್ಮ ದ್ರೋಣ ಕರ್ಣ ದುರ್ಯೋಧನರ ಜೀವನ ಕಾನನವನ್ನು ದಹಿಸಿ ಪ್ರಜ್ವಲಿಸಿತು. ಅದು ಶ್ರೀಕೃಷ್ಣ ಪಾರ್ಥ ಧರ್ಮ ಭೀಮ ಅಭಿಮನ್ಯು ಮುಂತಾದ ವೀರರು ಯಶಸ್ಸಿನ ಧ್ವಜ ಹಾರಿಸಿದ ನೆಲೆ!

ಆ ಮಹಾ ಘಟನೆಗಳು ಒಟ್ಟುಗೂಡಿದುದರ ಮಧ್ಯೆ, ಕಿಡಿಮಳೆಯ ನಟ್ಟನಡುವೆ ಸಿಡಿಮದ್ದಿನಂತಿದ್ದ ಸಿತವಾಹನ ಅರ್ಜುನನಿಗೆ ಚಿತ್ರಾಂಗದೆಯ ನೆನಪೆಲ್ಲಾಗುವುದು? ಹೆಸರೆನ್ನುವುದನ್ನು ಅವಲಂಬಿಸಿದ್ದರೂ, ಅದು ನೆನಪಿನಲ್ಲಿರುವುದೆ? ಅಯ್ಯೊ, ಹೆಸರಿಲ್ಲದ ಆ ವನಿತೆ ಮನಸ್ಸಿನಿಂದ ಜಾರಿ ನಿಧಾನವಾಗಿ ವಿಸ್ಮೃತಿಯ ಕತ್ತಲ ವೈತರಣಿಗೆ ಬಿದ್ದು ಹೋದಳು!

**ಪಾರ್ಥನಾ ಗಾಂಡೀವಕಾಶೀರ್ವಚನ ಶಕ್ತಿಯಂ ನೀಡಿ ನೆರವಾದಪೆಂ!**

ನರನು ಮರೆತರೇನು, ಸತ್ಯವು ತಾನು ಮರೆಯುವುದೆ? ಚಿತ್ರಾಂಗದೆ ಮರೆಯುವಳೆ? ಭಾರತ ಯುದ್ಧಾರಂಭದ ಮೊದಲಿನಿಂದ ಪಾರ್ಥನಿಗೆ ಗೆಲುವಾಗಲಿ! ಅರ್ಜುನನಿಗೆ ಸೊಗವಾಗಲಿ! ಜಯವಧು ಸವತಿಯಾಗಲಿ! ಧರ್ಮ ಸಂಸ್ಥಾಪಕನಾದ ದೇವಕಿನಂದನ ಶ್ರೀಕೃಷ್ಣನಿಗೆ ನಿತ್ಯ ಮಂಗಳವಾಗಲಿ! ಲೋಕಕ್ಕೆ ಶಾಂತಿಯುಂಟಾಗಲಿ! ಎಂದು ವ್ರತದೀಕ್ಷೆ ಕೈಕೊಂಡಾಗಿನಿಂದ ಶಿವನನ್ನು ಪ್ರತಿದಿನ ಪ್ರಾರ್ಥಿಸುತ್ತಿದ್ದಳು. ಪಾಂಡವ ವಿಜಯವಾರ್ತೆ ಕಿವಿಗೆ ಬೀಳುವವರೆಗೆ ಬೇಡಿಕೊಳ್ಳುತ್ತಿದ್ದಳು.

ಹಾಗೆ ವ್ರತದಲ್ಲಿರುವಾಗ ಒಮ್ಮೆ ಬಭ್ರುವಾಹನನು ತಾಯಿಯ ಬಳಿಗೆ ಬಂದನು. ಮಾತಿನ ನಡುವೆ ವ್ರತದ ಉದ್ದೇಶವನ್ನು ಕೇಳಿದನು. ಆಗ ಅವಳು ಹೀಗೆ ಹೇಳಿದಳು:

'ಈಶ್ವರನನ್ನು ಧರ್ಮದ ಜಯಕ್ಕಾಗಿ ಬೇಡುತ್ತಿದ್ದೇನೆ. ಋತದ ಖಡ್ಗಕ್ಕೆ ಸುವ್ರತದ ಪ್ರಾರ್ಥನೆ ಸಾಣೆಯಾಗುವುದು. ಧರ್ಮದ ಮಹಾಭಾರತದ ಜಯಕ್ಕೆ ಪಾರ್ಥನ ಆ ಪೌರುಷವೆಷ್ಟಿದೆಯೊ, ಚಿತ್ರೆಯ ಈ ವ್ರತದ ಪ್ರಾರ್ಥನಾ ಪೌರುಷವು ಅಷ್ಟೆ ಇರುತ್ತದೆ ಎಂಬುದು ಶ್ರದ್ಧೆಯ ಸತ್ಯ!

'ಧರ್ಮದ ಮೇಲ್ಮೆಗಾಗಿ ಹೋರಾಡುವ ಆತನು ಗೆದ್ದರೆ, ಅವನ ಬಿಲ್ಲಿನ ಸಾಮರ್ಥ್ಯವೊಂದೇ ಕಾರಣವಲ್ಲ. ಧರ್ಮಿಷ್ಠರಾದವರ ಆಶೀರ್ವಾದ ಪೂರ್ಣಬಲ ಅಲ್ಲಿರುವುದು ಎಂದು ತಿಳಿ. ಇದು ನಿಜ. ಗಾಂಗೇಯನ ದೇಹವು ಆ ಕೌರವರ ಪಕ್ಷದಲ್ಲಿದ್ದರೂ, ಆಶೀರ್ವಾದವೆಲ್ಲ ಪಾಂಡವರ ಕಡೆಗೆ! ಮುರವೈರಿ ಶ್ರೀಕೃಷ್ಣ ಪಾಂಡವರ ಕಡೆಗಿದ್ದ, ಬಲರಾಮನು ಸೈನ್ಯ ಸಮೇತ ಆ ಕಡೆಗಿದ್ದನಲ್ಲವೆ? ನಾನು ಹಾಗೆ, ಪಾರ್ಥನ ಗಾಂಡೀವಕ್ಕೆ ಆಶೀರ್ವಚನ ಶಕ್ತಿಯನ್ನು ನೀಡಿ ನೆರವಾಗುತ್ತೇನೆ!

ತಾಯಿಯ ನುಡಿಯನ್ನು ಆಸಕ್ತಿಯಿಂದ ಕೇಳಿದ ಮಗನು ಕಣ್ಣಿನಲ್ಲಿ ಹನಿ ತುಂಬಿಕೊಂಡನು. ತಾನು ಆ ಕುರುಭೂಮಿಗೆ ಹೋಗಿ, ಧರ್ಮದ ಜಯಕ್ಕೆ ನೆರವಾಗಿ, ಮಣಿಪುರದ ಕೀರ್ತಿಗೆ ಕಲಶವಿಟ್ಟು ಬರುವೆನೆಂದನು. ಆಗ ತಾಯಿಯು 'ಕರೆಯದೆ ಹೋಗುವುದು ರಾಜರಿಗೆ ತಕ್ಕ ಮರ್ಯಾದೆಯಲ್ಲ' ಎಂದು ಹೇಳಿದಳು. ಅದಕ್ಕೆ ಮಗನು ನಿಟ್ಟುಸಿರು ಬಿಡುತ್ತ 'ತಾನು ಎಂದಾದರೂ ಒಂದು ದಿನ ಕದನದಲ್ಲಿ ಅರ್ಜುನನ ಎದುರು ನಿಂತು ತನ್ನ ಪರಾಕ್ರಮದ ತೇಜಸ್ಸನ್ನು ತೋರಿಸುವೆನು. ಅವನು ಮುಂದೆ ಯಾವಾಗಲೂ ಮಣಿಪುರ ದೊರೆಗಳನ್ನು ಮರೆಯದ ರೀತಿ ಮಾಡುವೆನು' ಎಂದು ಹೇಳಿದನು.

ಆ ಮಾತಿಗೆ ತಾಯಿ ತಿಳಿಯದ ಆಶಂಕೆಯಿಂದ ಕಂಪಿಸಿ, ಕುಮಾರನನ್ನು ಸಂತೈಸಿ ಕಳುಹಿಸಿದಳು. ಕೈಮುಗಿದು ಕಣ್ಮುಚ್ಚಿ ದೇವತೆಗಳನ್ನು ಕಾಪಾಡಿ ಎಂದು ಬೇಡಿಕೊಂಡಳು!

ಯಜ್ಞಹರಿ, ಕಟ್ಟುಗೊಂಡುದು ಕೂಡೆ ಚಿತ್ರಾಂಗದಾ ತನೂಜನ ದಿಟ್ಟ ಭಟರಿಂದೆ!

ಕಾಲದ ಹೊಳೆ ಈ ರೀತಿ ಹರಿದಿರಲು, ಒಂದು ವಾರ್ತೆ ಹರಡಿತು. ಯಾಗ ನಿಮಿತ್ತವಾಗಿ ಯಾಗದ ಕುದುರೆಯ ಬೆಂಗಾವಲಿಗೆ ಸೈನ್ಯಸಾಗರ ಸಹಿತ ರಣಧೀರ ನೃಪರೊಡನೆ, ರಣ ವಧೂವಲ್ಲಭ ವಿಜಯನು ವಿಜಯಕ್ಕೆಂದು ಹೊರಟಿರುವನು. ದೇಶ ದೇಶವನ್ನು ಗೆಲ್ಲುತ್ತ, ಪರಾಕ್ರಮ ಕತ್ತಿಯನ್ನು ಝಳಪಿಸುತ್ತ ಚಂಡವೇಗದಿಂದ ಇತ್ತ ಕಡೆಗೆ ನುಗ್ಗುತ್ತಿರುವನು.

ಚಿತ್ರಾಂಗದೆಗೆ ಬಹುಕಾಲದ ನಂತರ ತನ್ನ ಪತಿಯ ಸಂದರ್ಶನ ಪ್ರತ್ಯಕ್ಷವಾಗಿ ಲಭಿಸುತ್ತದೆಂದು ಸಂತಸ ಉಂಟಾಯಿತು. ಅದೇ ರೀತಿ ಅವಳ ಮಗನು – ತನಗೆ ಮೂರು ಲೋಕದ ವೀರ, ಯಶಸ್ಸಿನ ತವರಿನಂತಿರುವ ಸವ್ಯಸಾಚಿಯ ಜೊತೆಗೆ ಸಮರ ಉಂಟಾಗುವುದೆಂದು ಸಂತೋಷಗೊಂಡನು. ಅವರಲ್ಲಿ ಒಬ್ಬರು ಇನ್ನೊಬ್ಬರಿಗೆ ತಮ್ಮ ಗುಟ್ಟನ್ನು ಹೇಳಲಿಲ್ಲ.

ಕಾರ್ಮುಗಿಲು ಮುತ್ತಿಕೊಂಡು ಗಗನವನ್ನು ಏರಿ, ವರ್ಷಋತು ಹರ್ಷವನ್ನು ಎರಚುವಂತೆ ಮಳೆಗರೆಯಿತು. ಆಗ ಹಸುರು ಹೊಮ್ಮಿಸುವ ಹೊಸಹುಲ್ಲಿನ ಸೊಂಪಿಡಿದು ಹೊಳೆಯುವ ನೆಲದ ಶಾದ್ವಲ ಶ್ಯಾಮಲ ಸ್ಮಿತದ ಸುಂದರ ಕಾಂತಿ ಕಂಡಿತು. ಅದು ತಾನು ದೇವಧನುಸ್ಸಿನ (ಕಾಮನಬಿಲ್ಲು) ವರ್ಣಗಳನ್ನು ಪ್ರಕಟಪಡಿಸುತ್ತ, ಮೋಹಿಸುತ್ತ ಬಂದು ಕುಸುಮ ಸಮೂಹದ ಕೇಸರದ ದೂಳಿಯನ್ನು ಕೆದರುತ್ತಿರುವ ಗಾಳಿಯ ಜೊತೆಗೂಡಿ ಕಳಕಳಿಸುತ್ತಿತ್ತು. ಪುರದ ಉದ್ಯಾನ ವೀದಿಯಲ್ಲಿ ಪಕ್ಷಿಗಳ ಸುಮಧುರಗಾನ ಹೊಮ್ಮಿ ಬರುತ್ತಿತ್ತು. ಅಂತಹ ಸ್ಥಳದಲ್ಲಿ ಅರ್ಜುನನ ಸೈನ್ಯ ಶಿಬಿರ ಬೀಡು ಬಿಟ್ಟಿತು!

ಚಿತ್ರಾಂಗದೆಯ ಮಗನ ದಿಟ್ಟ ಭಟರು ಯಜ್ಞದ ಕುದುರೆಯ ಹಣೆಗೆ ಕಟ್ಟಿದ್ದ ಲಿಖಿತವನ್ನು ಅನುಸರಿಸಿ ಕಟ್ಟಿ ಹಾಕಿದರು. ಆ ಪಟ್ಟಣದ ದೊರೆ ಅಕ್ಕಪಕ್ಕದ ರಾಜರ ದರ್ಪವನ್ನು ಕೋಪದಿಂದ ಬತ್ತಿಸಿ, ನೀಲಧ್ವಜನನ್ನು ಸೋಲಿಸಿ, ಹಂಸಧ್ವಜನನ್ನು ಗೆದ್ದು, ಪ್ರಮೀಲೆಯನ್ನು ಸೋಲಿಸಿದವನು. ಅವನು ಲಕ್ಷ್ಮಿಯ ನಿವಾಸವೆನ್ನುವಂತೆ ಸ್ವರ್ಣ ಸಂಪತ್ತಿನಿಂದ ಮೇರುವಿಗೆ ಸಮನಾಗಿ ಕಣ್ಣು ಕೋರೈಸಿ ಹೊಳೆಯುವ ರಾಜಧಾನಿಗಳನ್ನು ಸುಲಿದು ಸೂರೆಗೊಂಡಿರುವವನು. ಅದನ್ನು ಪಾರ್ಥನೆ ಸ್ವತಃ ಕಂಡು ಮಣಿಪುರದ ಸಿರಿಗೆ ಬೆರಗಾದನು. ಹಂಸಧ್ವಜವನ್ನು ಕುರಿತು 'ಆ ನಾಡಿನ ಅರಸು ಯಾರು?' ಎಂದು ಕೇಳಿದನು.

'ಪಾರ್ಥನೇ, ಏನೆಂದು ಹೇಳಲಿ? ಈ ಪಟ್ಟಣದ ಅರಸನಿಗೆ ಗೊತ್ತುಪಡಿಸಿದ ತೆರಿಗೆಯನ್ನು ನಾವಿಬ್ಬರು ತಪ್ಪದೆಯೆ ಪ್ರತಿವರ್ಷಕ್ಕೆ ಒಂದು ಸಾವಿರ ಬಂಡಿ ಚಿನ್ನವನ್ನು ಕೊಟ್ಟು ಬರುತ್ತೇವೆ. ಹಾಗಲ್ಲದಿದ್ದರೆ ದಂಡನೆಯೆಂದು ಬೆದರುತ್ತೇವೆ! ಈತನಿಗೆ ಸಚಿವನು ಸುಬುದ್ಧಿ. ಜೊತೆಗೆ ಇವನ ಸೈನ್ಯವನ್ನು ಗೆಲ್ಲಬಲ್ಲವರು ಲೋಕದಲ್ಲಿಲ್ಲ. ಅವನ ಹೆಸರು ಬಭ್ರುವಾಹನ!

'ಕರುಣೆಯಲ್ಲಿ ನಯ ವಿನಯಗಳಲ್ಲಿ ಮತ್ತು ಶೌರ್ಯದಲ್ಲಿ, ಸಂಸ್ಕೃತಿಯ ಸೌಜನ್ಯ ಭಕ್ತಿಯಲ್ಲಿ,